**(ಸಾಕ್ಷಿಯನ್ನು ಇಂದು ದಿ:06-01-2020 ರಂದು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು)**

ಪಾಟಿ ಸವಾಲು**:** 1ನೇ ಎದುರುದಾರರ ಪರ ಶ್ರೀ. ಎಂ.ಎಚ್.ಎಚ್. ವಕೀಲರಿಂದಃ

ಪಿರ್ಯಾದಿನಲ್ಲಿ ವಾಹನ ಚಾಲಕನ ಹೆಸರು ಮತ್ತು ಯಾವ ವಾಹನ ಅಪಘಾತ ಮಾಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಗೊತ್ತಿಲ್ಲ. 1ನೇ ಎದುರುದಾರ ಮತ್ತು ಅವರ ವಾಹನವನ್ನು ಶಾಮೀಲು ಮಾಡಿಕೊಂಡು ದಾಖಲೆಗಳನ್ನು ಸೃಷ್ಟಿಸಿ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿನಲ್ಲಿ ಯಾವದೋ ಒಂದು ಟಿಪ್ಪರ ನನ್ನ ಮಗನಿಗೆ ಡಿಕ್ಕಿ ಹೊಡೆದಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಎರಡು ವಾಹನಗಳ ನಡುವೆ ಅಪಘಾತ ಆಗಿದ್ದು 1ನೇ ಎದುರುದಾರನ ಟಿಪ್ಪರನಿಂದ ಅಪಘಾತ ಆಗಿದೆ ಪಿರ್ಯಾದಿನಲ್ಲಿ ನಮೂದಿಸಲಾಗಿದೆ ಎಂದು ಸಾಕ್ಷಿ ನುಡಿಯತ್ತಾರೆ. ಯಾವ ವಾಹನ ಡಿಕ್ಕಿ ಹೊಡೆದಿದೆ ಎಂದು ಗೊತ್ತಿಲ್ಲದೆ 1ನೇ ಎದುರುದಾರರ ವಾಹನದ ಮೇಲೆ ದೂರು ನೀಡಲಾಗಿದೆ ಎಂದರೆ ಸರಿಯಲ್ಲ. 1ನೇ ಎದುರುದಾರರ ವಾಹನಕ್ಕೆ ಮತ್ತು ಚಾಲಕನಿಗೆ ಮತ್ತು ಈ ಅಪಘಾತಕ್ಕೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಮಗ ಯಾರ ಅಡಿಯಲ್ಲಿ ಮತ್ತು ಎಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದರು ಎಂದು ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ತಿಂಗಳಿಗೆ 15 ಸಾವಿರ ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರಿ ಜೆ.ಎ.ಸಿ. ವಕೀಲರಿಂದ 2ನೇ ಎದುರುದಾರರ ಪರವಾಗಿಃ

ಅಪಘಾತ 4 ವರ್ಷಗಳ ಹಿಂದೆ ಮಧ್ಯಾಹ್ನ 1-00 ಗಂಟೆ ಸುಮಾರಿಗೆ ಆಗಿದೆ. ಅಪಘಾತದಲ್ಲಿ ತೀರಿಕೊಂಡವರು ನನ್ನ ಮಗ. ನನ್ನ ಮಗನ ಮದುವೆ ಆಗಿರಲಿಲ್ಲ. ನನ್ನ ಮಗ ಸೋಮನಾಥ. ಸೋಮನಾಥರವರ ವಾರಸುದಾರರು ನಾನೇ ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೇನೆ. ವಾರಸಾ ಪತ್ರ ಹಾಜರಪಡಿಸಿದ್ದೇನೆ. ವಾರಸಾ ಪತ್ರ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ದಿನವೇ ಯಾವ ವಾಹನ ಡಿಕ್ಕಿ ಹೊಡೆದಿದೆ ಗೊತ್ತಾಗಿತ್ತು. ವಾಹನ ಮಾಲಿಕ ಮತ್ತು ವಾಹನ ಚಾಲಕ ಯಾರೂ ಎಂದು ಅದೇ ದಿನ ಗೊತ್ತಾಗಿತ್ತು. ಡಿಕ್ಕಿ ಹೊಡೆದ

ವಾಹನಕ್ಕೆ ವಿಮಾ ಪಾಲಸಿ ಇರದ ಕಾರಣ ಪಾಲಸಿ ಇರುವ 1ನೇ ಎದುರುದಾರನ ವಾಹನ ಮತ್ತು 1ನೇ ಎದುರುದಾರರ ಮೇಲೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ 2ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಟಿಪ್ಪರ ಚಲಾಯಿಸಲು ಘನ ವಾಹನ ಚಲಾಯಿಸುವ ಪರವಾನಿಗೆ ಬೇಕಾಗುತ್ತದೆ ಎಂದರೆ ಗೊತ್ತಿಲ್ಲ.

ನನ್ನ ಮಗ ಗೌಂಡಿ ಕೈ ಅಡಿ ಕೆಲಸ ಮಾಡುತ್ತಿದ್ದನು. ಯಾವದೇ ಗೌಂಡಿಗೆ ಖಾಯಂ ಕೆಲಸ ಇರುವುದಿಲ್ಲ ಮತ್ತು ತಿಂಗಳಿಗೆ 15 ಸಾವಿರ ಸಂಪಾದನೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮೂರು ಜನ ಮಕ್ಕಳು ಇರುತ್ತಾರೆ. ಮೃತ ಸೋಮನಾಥನಿಗೆ 19-20 ವರ್ಷ ಪ್ರಾಯವಾಗಿತ್ತು. ಸೋಮನಾಥನಿಗೆ 19-20 ವರ್ಷ ಪ್ರಾಯವಾಗಿತ್ತು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ನಾನು ಮತ್ತು 1ನೇ ಎದುರುದಾರರು ಶಾಮೀಲಾಗಿ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿದ್ದರಿಂದ 2ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಓ ಹೇ ಕೇ ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.